

## ಉತ್ತಮ ವಿಶ್ಲೇಷಣೆ

'ಟೈಟಲ್ ಇಷ್ಟೇನೆ...!' ('ಸುಧಾ' ನವೆಂಬರ್ 20) ಮುಖಪುಟ ಲೇಖನದಲ್ಲಿ ರಘುನಾಥ. ಚ.ಹ.ರವರು ಸಿನಿಮಾಗಳ ಶೀರ್ಷಿಕೆಗಳ ಕುರಿತು ಚೆನ್ನಾಗಿ ವಿಶ್ಲೇಷಿಸಿದ್ದಾರೆ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಎಂ.ಜಿ. ರಾಮಚಂದ್ರ, ಮಂಡಗಳಲೆ, ರವೀಂದ್ರನಾಥ ಶಿ. ಯಡಹಳ್ಳಿ, ಶೋಭಾ ಜಿ. ತಿಳವೆ, ದಾವಣಗೆರೆ, ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

## ಸೂಕ್ತ ಸಲಹೆ

ಮಾಹಿತಿ ಹಕ್ಕು ಕಾಯ್ದೆ ಬಗ್ಗೆ 'ನಿಮ್ಮೊಡನೆ' ಅಂಕಣದಲ್ಲಿ ಬಿ.ಎಂ. ಹನೀಫ್ ಉಪಯುಕ್ತ ಸಲಹೆ ನೀಡಿದ್ದಾರೆ.

–ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ಮಹಾವೀರ ಕಾಸರ, ಶಿವಮೊಗ್ಗ

## ಹಾಸ್ಯ-ಕಿರುನಗೆ

'ಹಾಸ್ಯವಿದ್ದರೆ ವೃತ್ತಿ ಬೋರಾಗಲ್ಲ' ಡಾ. ಎಚ್. ಗಿರಿಜಮ್ಮ ಅವರ ನವಿರಾದ ಹಾಸ್ಯ ಕಿರುನಗೆ ಮೂಡಿಸಲು ಯಶಸ್ವಿಯಾಯಿತು.

–ಎಚ್. ಆನಂದ್ ಕುಮಾರ್, ಚಿತ್ರದುರ್ಗ

## ಉತ್ತಮ ಸಲಹೆ

ಶಿಕ್ಷಣ ಅಂಕಣದ 'ಕಲಿತದ್ದು ನೆನಪಾಗಲ್ವಾ' (ಡಾ. ವಿನಯ ಶ್ರೀನಿವಾಸ್) ಲೇಖನ ನೆನಪಿನಲ್ಲಿ ಉಳಿಸಿಕೊಳ್ಳುವುದಕ್ಕೂ ನೂರೆಂಟು ಸುಲಭದ ದಾರಿಗಳಿರುವ ಬಗ್ಗೆ ಈಗಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಮಾರ್ಗದರ್ಶಿ ಸೂಚನೆಗಳನ್ನು ನೀಡಿದೆ.

–ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ,\
ಮೈಸೂರು ಕುಸುಮ, ಶ್ರವಣಬೆಳಗೊಳ

## ಚಿತ್ತಾಕರ್ಷಕ

'ಬೆಟ್ಟದ ಮೇಲೊಂದು ಕ್ಯಾಮೆರಾ ಇಟ್ಟು..' ಅಮರದೀಪ ಅವರ ಚಿತ್ರಲೇಖನ ಚಿತ್ತಾಕರ್ಷಕವಾಗಿದೆ. ಚಿತ್ರಗಳು ಕಣ್ಮನ ತಣಿಸುವಂತಿದೆ.

–ಅಣಜಿ ಮಂಜುನಾಥ್

## ಚರ್ಚೆ ಆರೋಗ್ಯಕರವಲ್ಲ

'ಆಪ್ತಗೆಳತಿ'ಯ ಮೊದಲನೇ ಸುದೀರ್ಘವಾದ ಪ್ರಶ್ನೆ ವಿಪರೀತ ಅಸಹ್ಯ ಹುಟ್ಟಿಸುವಂತಿದೆ. 'ಕಾಮಕೇಳಿ'ಯ ಈ ಪರಿಯ ವಿವರಣೆ ನಮ್ಮ ನೆಚ್ಚಿನ 'ಸುಧಾ' ಪತ್ರಿಕೆಗೆ ಶೋಭೆಯಲ್ಲ. ಇಷ್ಟೊಂದು ಬಹಿರಂಗವಾದ ಚರ್ಚೆಯೂ ಆರೋಗ್ಯಕರವಲ್ಲ.

–ಎಚ್.ಜಿ. ಜಗದೀಶ್, ಮೈಸೂರು

## ನುಗ್ಗೆಸೊಪ್ಪು ಪ್ರಿಯ

ನಾನೂ ನುಗ್ಗೆಸೊಪ್ಪಿನ ಪ್ರಿಯ. ಅಡುಗೆ ಪುಟದಲ್ಲಿ ನುಗ್ಗೆಸೊಪ್ಪಿನ ನಾನಾ ತರದ ಸವಿರುಚಿಗಳನ್ನು ತಿಳಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು.

–ಓಂ ಚನ್ನೇಶ್ ಅರಬಿಳಚಿಕ್ಯಾಂಪ್, ಭದ್ರಾವತಿ

## ಉಪಯುಕ್ತ ಮಾಹಿತಿ

'ಚಾಕೊಲೇಟ್ ಫೇಸ್ ಪ್ಯಾಕ್' (ಶ್ರುತಿ. ಕೆ.ಎಸ್.) ಲೇಖನ ಸಾಕಷ್ಟು ಮಾಹಿತಿಯನ್ನು ನೀಡಿತು. ಸೌಂದರ್ಯ ವರ್ಧನೆಗೆ ಚಾಕೊಲೇಟ್ ಎಷ್ಟೊಂದು ಉಪಯುಕ್ತವಾಗಿದೆ ಎಂದು ತಿಳಿದಿರಲಿಲ್ಲ.

–ಪುಟ್ಟಗೌರಿ, ಚಿದಾನಂದ, ಕಳಸಮ್ಮ, ಗುಲ್ಬರ್ಗ

## ಕಥೆ ಚೆನ್ನಾಗಿದೆ

ವಿಶ್ವನಾಥ ಅಡಿಗರ ಕಥೆ 'ಧರೆಗೆ ಕಳವಳವು' ಚೆನ್ನಾಗಿದೆ.

–ರಾಜಶೇಖರಗೌಡ ಕೊಟ್ಟೂರು

## ವಾಕರಿಕೆ ಬಂತು

'ಧರೆಗೆ ಕಳವಳವು' ಕಥೆ ಒಂದು ವಿಡಂಬನೆ. 'ಬಯಲು ಮಲ ವಿಸರ್ಜನೆ' ತಪ್ಪು ಎಂದು ಜನರಿಗೆ ತಿಳಿಹೇಳಿದ ವಿಚಾರವಾದಿ ಮೂರ್ತಿರಾಯರು ಬಯಲು ಮಲವಿಸರ್ಜನೆಯಲ್ಲಿ ತೊಡಗಬೇಕಾಗಿ ಬಂದ ಅನಿವಾರ್ಯತೆ ವಿಡಂಬಿತವಾಗಿದ್ದರೂ, ಅದರ ವಿವರಣೆ ವಾಕರಿಸುವಂತಾಯ್ತು.

–ರೇಷ್ಮಾ ಎ.ಎಸ್., ಬೆಂಗಳೂರು, ಕೊಹಿಮ, ಬಸರಕೋಡು

## ಕುತೂಹಲಕಾರಿ

'ದಶ ಸಹಸ್ರ ಬುದ್ಧರ ಮೊನೆಸ್ಟರಿ' (ಉದಯ ಕುಮಾರ್ ಹಬ್ಬು)ಯ ಪರಿಚಯ ಕುತೂಹಲಕಾರಿ.

–ಎಸ್. ಚನ್ನಪ್ಪ, ಮೈಸೂರು

## ಮಾಹಿತಿಪೂರ್ಣ

ಮಧುಮೇಹದೊಂದಿಗೆ ಮಧುರ ಜೀವನ ಆರೋಗ್ಯ ಲೇಖನ (ಡಾ. ಸತೀಶ್ ರೈ, ಬೆಳ್ಳಿಪ್ಪಾಡಿ) ಬಹಳಷ್ಟು ಮಾಹಿತಿ ನೀಡಿತು.

–ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ




